# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್/ಬಿ.ಡಿ-573/2016/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:22-11-2017.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ ವಿ.ಎಸ್. ಕೃಷ್ಣ ತಂದೆ ಲೇಟ್ ಎ.ಸಿದ್ದಪ್ಪಗೌಡ, ವಾಸ: ಅರಳಾಳುಸಂದ್ರ ಗ್ರಾಮ ಮತ್ತು ಅಂಚೆ, ವಿರುಪಾಕ್ಷಿಪುರ ಹೋಬಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ವಿ.ಎಸ್. ಕೃಷ್ಣ ತಂದೆ ಲೇಟ್ ಎ.ಸಿದ್ದಪ್ಪಗೌಡ, ವಾಸ: ಅರಳಾಳುಸಂದ್ರ ಗ್ರಾಮ ಮತ್ತು ಅಂಚೆ, ವಿರುಪಾಕ್ಷಿಪುರ ಹೋಬಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು (1)ಶ್ರೀ ವಿ.ಎಸ್. ಅಶೋಕ ಉಪ-ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರಾಮನಗರ ಜಿಲ್ಲೆ (2)ಶ್ರೀವಿ.ಎಸ್. ಸುಜೀವನ್ ಕುಮಾರ, ಅಧ್ಯಕ್ಷರು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಸಹಕಾರ ಸಂಘ, ಮತ್ತು ಗೃಹ ನಿರ್ಮಾಣ ಸಂಘ, ಅರಳಾಳುಸಂದ್ರ ಗ್ರಾಮ ಮತ್ತು ಅಂಚೆ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು (3) ಶ್ರೀಮತಿ ಬಿ.ಅನುಸೂಯಮ್ಮ, ನಿವೃತ್ತ ಪೋಸ್ಟ್ ಮಾಸ್ಟರ್ ಮತ್ತು ಉಪಾಧ್ಯಕ್ಷರು, ಕರ್ನಾಟಕ ರೈತ ಸಂಘ, ಅರಳಾಳುಸಂದ್ರ ಗ್ರಾಮ ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ದೂರುದಾರರರು ತಮ್ಮ ಹಿತ್ತಲವನ್ನು ಒತ್ತುವರಿ ಮಾಡಿಕೊಂಡು ಮರಗಳನ್ನು 2ನೇ ಎದುರುದಾರರು ಕಡಿದ್ದಿದ್ದರು ಮತ್ತು ಗೊಬ್ಬರ ತೆಗೆದುಕೊಂಡು ಹೋಗಿದ್ದರು, ಇದನ್ನು ಕೇಳಲು ಹೋದರೆ ಹೊಡೆ-ಬಡೆ ಮಾಡಿ ಕೊಲೆ ಬೆದರಿಕೆ ಹಾಕಿದರು. ಈ ಬಗ್ಗೆ ದಿ: 25-7-2003 ರಂದು ಅಕ್ಕೂರು ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದೇನೆ. ನಂತರ ದಿ: 7-10-2003 ರಂದು ನನಗೆ ಹೊಡೆದು ಗಲಾಟೆ ಮಾಡಿದರು, ಇದರ ಬಗ್ಗೆ ಸಹ ದೂರು ಕೊಟ್ಟಾಗ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕೃಷಿ ಇಲಾಖೆಯಲ್ಲಿ ಕೃಷಿ ಭಾಗ್ಯ ಯೋಜನೆಗೆ 3ನೇ ಎದರುದಾರರ ಅರ್ಜಿ ಸಲ್ಲಿಸಿ ಬಿಲ್ಲೇವಾ ಪಟ್ಟಣ ಗ್ರಾಮದ ಸರ್ವೆ ನಂ.51/1 ರ 2 ಎಕರೆ 12 ಗುಂಟೆ ಜಮೀನಿನ ಪಹಣಿ

11

ಸಲ್ಲಿಸಿದ್ದಾರೆ. ಆದರೆ, ಸರ್ವೆ ನಂ.44/2 ಅರಳಾಳುಸಂದ್ರ ಗ್ರಾಮದ 33 ಗುಂಟೆ ಜಮೀನಿನಲ್ಲಿ ಒತ್ತುವರಿ ಮಾಡಿಕೊಂಡು ಸರ್ಕಾರಿ ಜಮೀನು ಒತ್ತುವರಿ ಮಾಡಿ ಭೂಕಬಳಿಕೆ ಮಾಡಿ ಗ್ರೀನ್ ಹೌಸ್ ಕಟ್ಟುತ್ತಿದ್ದಾರೆ. ಸುಮಾರು 20 ರಿಂದ 23 ಲಕ್ಷ ಸರ್ಕಾರದ ಸಹಾಯ ಧನವನ್ನು ತಮ್ಮದೇ ಇಲಾಖೆಯಿಂದ ಅವರೇ ಲಪಟಾಯಿಸುತ್ತಿದ್ದಾರೆ. ಈ 33 ಗುಂಟೆ ಜಮೀನಿನಲ್ಲಿ ನಮ್ಮ ತಂದೆಗೂ 1 ಗುಂಟೆ ಜಮೀನು ಇದೆ, ಯಾವುದೋ ಜಮೀನಿನ ದಾಖಲೆ ಕೊಟ್ಟು ಬೇರೆ ಜಮೀನಿನಲ್ಲಿ ಹಸಿರು ಮನೆ ನಿರ್ಮಿಸುತ್ತಿರುವುದರಿಂದ ಎದರುದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲು ವಿನಂತಿಸುತ್ತಿದ್ದಾರೆ. ಹಾಗೂ ಎದರುದಾರರ ಮನೆಯ ಮುಂದೆ ತಮ್ಮ ತಾತ ದೇವಸ್ಥಾನ ಕಟ್ಟಿಸಿದ್ದು, ಎದರುದಾರರು ಪ್ರದಕ್ಷಣೆಗೆ ಸ್ಥಳ ಬಿಡದೇ ಒತ್ತುವರಿ ಮಾಡಿದ್ದಾರೆ. ಇದೆನ್ನಲ್ಲಾ ಬಿಡಿಸಿಕೊಡುವಂತೆ ಕೋರಿಕೊಂಡಿದ್ದಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಜಮೀನಿನ ವಿಚಾರವಾಗಿ ಜಗಳವಾಗಿರುವ ಬಗ್ಗೆ ಇದೇ ಮೊದಲ ಬಾರಿಗೆ ತಿಳಿಯಿತು. ನಾನು ಶ್ರದ್ಧಾ ನಿಷ್ಠೆಯಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಕೃಷಿ ಭಾಗ್ಯ ಕೋರಿಕೆ ಅರ್ಜಿ ನನ್ನ ಕಛೇರಿಗೆ ಬಂದಿಲ್ಲ. ಸದರಿ ಹಸಿರು ಮನೆಯ ಬಗ್ಗೆ ನನಗೆ ಯಾವುದೇ ರೀತಿಯ ನನಗೆ ವೈಯಕ್ತಿಕ ಹಿತಾಸಕ್ತಿ ಇಲ್ಲ. ದೂರುದಾರರು ದ್ವೇಷಾಸೂಯೆಯಿಂದ ಉನ್ಮತ್ತರಾಗಿ ಅರ್ಜಿಯನ್ನು ತನ್ನ ವಿರುದ್ದ ಸಲ್ಲಿಸಿದ್ದಾರೆ. ಆದ್ದರಿಂದ ಈ ದೂರನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ.

(ಬಿ) 2ನೇ ಎದರುದಾರರು ನಮ್ಮ ತಾತಾ ಅಂದಾನಿಗೌಡರು ಕೊಂದಂಡರಾಮಸ್ವಾಮಿ ದೇವಸ್ಥಾನದ ಜೀಣೋ೯ದ್ಧಾರ ಮಾಡಿ ಖರ್ಚು ವೆಚ್ಚಗಳಿಗೆ ಜಮೀನು ಬಿಟ್ಟುಕೊಟ್ಟಿದ್ದಾರೆ. ಆದರೆ ಎದರುದಾರರು ಅದನ್ನು ಕಬಳಿಸಲು ಪ್ರಯತ್ನಿಸುತ್ತಿದ್ದಾರೆ. ಕೃಷಿ ಭಾಗ್ಯ ಪಾಲಿಹೌಸ್ ನಿರ್ಮಾಣ ಮಾಡಲು ಸಮತಟ್ಟು ಜಾಗ ಬೇಕಾಗಿರುತ್ತದೆ. ಆದ್ದರಿಂದ ಪಕ್ಕದ ಜಮೀನಿನಲ್ಲಿ ನಿರ್ಮಾಣ ಮಾಡಲಾಗಿದೆ. ಯಾವುದೇ ದಾಖಲೆಗಳಿಲ್ಲದೇ ದೂರುದಾರರು ಇದರಲ್ಲಿ ನನಗೆ 1 ಗುಂಟೆ ಬರಬೇಕು ಅಂತ ಬಹಳ ಸಲ ತಕರಾರು ಮಾಡಿದ್ದಾರೆ. ಆದ್ದರಿಂದ ಈ ದೂರನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

(ಸಿ) 3ನೇ ಎದರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

4. ಎದರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ತಮ್ಮ ಪ್ರತ್ಯುತ್ತರದಲ್ಲಿ ತಮ್ಮ ಹಿತ್ತಲಿನಲ್ಲಿದ್ದ ಹಸುಗಳ ಗೊಬ್ಬರವನ್ನು ಸರ್ಕಾರಿ ಜಾಗಕ್ಕೆ ಜೆ.ಸಿ.ಬಿ ಯಂತ್ರದಿಂದ ತಳ್ಳಿಸಿದ್ದಾರೆ. ಪಾಲಿಹೌಸ್ ಮತ್ತು ಕೃಷಿ ಹೊಂಡ ನಿರ್ಮಾಣ ಸ್ಥಳದಲ್ಲಿ ಜೆ.ಸಿ.ಬಿ.ಯಿಂದ ಸಮತಟ್ಟು ಮಾಡಿಸುತ್ತಿರುವ ಪೋಟೋ ಲಗತ್ತಿಸಲಾಗಿದೆ. ಎಷ್ಟು ಸರ್ಕಾರಿ

ಜಮೀನುಗಳನ್ನು ಎದರುದಾರರು ಒತ್ತುವರಿ ಮಾಡಿಸಿಕೊಂಡಿದ್ದಾರೆನ್ನುವುದು ಸರ್ವೆ ಮಾಡಿಸಿದಾಗ ಮಾತ್ರ ತಿಳಿಯುತ್ತದೆ. ಸಂಜೀವನ್ ಕುಮಾರ ರವರ ಹೆಂಡತಿ ಗಾರೆ ಸಹಾಯಕರು ಅಂತ ಗುರುತಿನ ಚೀಟಿ ಪಡೆದಿದ್ದಾರೆ. ಆದರೆ ಎಂದೂ ಸಹ ಗಾರೆ ಕೆಲಸ ಮಾಡಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಇಲಾಖೆಯಿಂದ ಹಣ ಮಂಜೂರು ಮಾಡಿಸಿಕೊಂಡಿದ್ದಾರೆ. ನನ್ನ ತಾತಾ ಅಂದಾನಿಗೌಡರು ಸಾಕಷ್ಟು ಗೋ ಕಟ್ಟೆಗಳು, ಭೂದಾನ, ಗೋ ದಾನ ಮಾಡಿದ್ದಾರೆ. ದೇವಸ್ಥಾನದ ಜಮೀನಿನಲ್ಲಿ 100 ಮಾವಿನ ಗಿಡಗಳಿದ್ದು, ಅವುಗಳಲ್ಲಿ ಕೆಲವು ಮಾವಿನ ಮರಗಳಿಗೆ ಕಸಿ ಮಾಡಿಸಲಾಗುತ್ತಿದೆ. ಇದಲ್ಲದೇ ಹಲವಾರು ಗಿಡಮರಗಳಿದ್ದು, ಅವುಗಳಿಗಾಗಿ ಕೃಷಿಹೊಂಡ ನಿರ್ಮಾಣ ಮಾಡಲಾಗಿದೆ. ದೂರುದಾರರು ಇಷ್ಟಲ್ಲದೇ ಎದರುದಾರರು ಮಾಡಿಕೊಂಡಿರುವ ರೇಷ್ಮೆ ಕೃಷಿಯ ಬಗ್ಗೆ, ಎದರುದಾರರು ಹೊಂದಿರುವ ಹಲವಾರು ಕೋಣೆಗಳ ಮನೆ ಇತ್ಯಾದಿಗಳನ್ನು ಹೇಳುತ್ತಾ ಎದರುದಾರರು ದೇವಸ್ಥಾನದ ಜಮೀನು ಒತ್ತುವರಿ ಮಾಡಿದ್ದಾರೆ ಎನ್ನುವ ಅಂಶಗಳನ್ನು ಪುನರಾವರ್ತಿಸಿದ್ದಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. 2 ಮತ್ತು 3ನೇ ಎದರುದಾರರು ಖಾಸಗಿ ವ್ಯಕ್ತಿಗಳಾಗಿದ್ದಾರೆ, ಅವರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾನೂನಿನ ಅಡಿಯಲ್ಲಿ ದೂರು ಸಲ್ಲಿಸಬೇಕಾದಲ್ಲಿ ಸಹಕಾರ ಸಂಘಗಳ ಅಧ್ಯಕ್ಷರ ಹುದ್ದೆಯಲ್ಲಿ ಅಥವಾ ರೈತ ಸಂಘದ ಉಪಾಧ್ಯಕ್ಷರ ಹುದ್ದೆಯಲ್ಲಿರುವಾಗ ಯಾವುದಾದರೂ ಕರ್ತವ್ಯ ಲೋಪಗಳನ್ನು ಎಸೆಗಿದ್ದರೆ ಅವರ ವಿರುದ್ಧ ದೂರು ಸಲ್ಲಿಸಬಹುದು. ದೂರುದಾರರು ಅವರು ವೈಯಕ್ತಿಕವಾಗಿ ಖಾಸಗಿ ಸ್ಥಳಗಳಲ್ಲಿ ಮಾಡಿಕೊಂಡಿರುವ ಗ್ರೀನ್ ಹೌಸ್ ಬಗ್ಗೆ ದೂರು ಸಲ್ಲಿಸಲು ಬರುವುದಿಲ್ಲ. 1ನೇ ಎದರುದಾರರು ಉಪ ಕೃಷಿ ನಿರ್ದೇಶಕಾಗಿದ್ದು, ಅವರು ಸಹ ತಾವು ಕೆಲಸ ಮಾಡುತ್ತಿರುವ ಹುದ್ದೆಯಲ್ಲಿ ಯಾವುದಾದರೂ ಕರ್ತವ್ಯಲೋಪವನ್ನು ಎಸೆಗಿದ್ದಲ್ಲಿ ಮಾತ್ರ ದೂರು ಸಲ್ಲಿಸಲು ಬರುತ್ತದೆ. ಎದರುದಾರರು ಸರ್ಕಾರಿ ಜಮೀನುಗಳಲ್ಲಿ ಸಹ ಒತ್ತುವರಿ ಮಾಡಿದ್ದಾರೆ ಅಂತ ದೂರುದಾರರು ಹೇಳುತ್ತಿರುವುದರಿಂದ, ಈ ವಿಷಯ ಮಾತ್ರ ಲೋಕಾಯುಕ್ತದ ವ್ಯಾಪ್ತಿಯಲ್ಲಿ ಬರುತ್ತದೆ.

6. ಆದ್ದರಿಂದ ದೂರುದಾರರನ್ನು ಖುದ್ದು ಹಾಜರುಪಡಿಸಿಕೊಂಡು ಯಾವ ಸರ್ಕಾರಿ ಜಮೀನುಗಳನ್ನು ಎದರುದಾರರು ಒತ್ತುವರಿ ಮಾಡಿಕೊಂಡಿದ್ದಾರೆ ಎನ್ನುವ ಬಗ್ಗೆ ವಿವರಗಳನ್ನು ಸಲ್ಲಿಸಲು ನಿರ್ದೇಶಿಸಲಾಗಿತ್ತು. ದೂರುದಾರರು ತಹಶೀಲ್ದಾರರು, ಚನ್ನಪಟ್ಟಣ ತಾಲ್ಲೂಕು ಇವರ ಮುಂದೆ ಅರ್ಜಿಯನ್ನು ಸಲ್ಲಿಸಿದ್ದೇನೆ. ಸರ್ಕಾರಿ ಜಮೀನುಗಳಲ್ಲಿ ಒತ್ತುವರಿಯಾಗಿರುವ ಪ್ರದೇಶಗಳನ್ನು ಗುರುತಿಸಲು ಸರ್ವೆ ಮಾಡಿಸಿದ್ದೇನೆ. ಸರ್ವೆ ಸ್ಕೆಚ್‌ಗಳ ನಕಲುಗಳು ಇನ್ನು ಸಿಕ್ಕಿಲ್ಲ ಅಂತ ತಿಳಿಸಿ ಸದರಿ ದಾಖಲೆಗಳನ್ನು ಸಲ್ಲಿಸಲು ದೂರುದಾರರು ಕಾಲಾವಕಾಶವನ್ನು ಕೋರಿದ್ದರು.

7. ದಿನಾಂಕ: 8-8-2017 ರಂದು ದೂರುದಾರರು ಒಂದು ಸ್ಕೆಚ್ ಮತ್ತು ವಿಭಾಗ ಪತ್ರದ ದಾಖಲೆಗಳನ್ನು ಸಲ್ಲಿಸಿ 1ನೇ ಎದುರುದಾರರು ಸರ್ವೆ ನಂ.44/2 ರಲ್ಲಿ ಒತ್ತುವರಿ ಆಗಿರುವ ಜಮೀನನ್ನು ಶ್ರೀ.ವಿ.ಎಸ್.ಸುಜೀವನ್ ಕುಮಾರ್ ಇವರ ಹೆಸರಿಗೆ ವರ್ಗಾವಣೆ ಮಾಡಿ ಬಚಾವು ಆಗಲು ಪ್ರಯತ್ನಿಸಿದ್ದಾರೆ ಅಂತ ತಿಳಿಸುತ್ತಾ ಸರ್ವೆ ನಂ.44/2 ರ ಜಮೀನು ಒಟ್ಟು ಕುಟುಂಬದ ಜಮೀನು ಆಗಿದೆ ಅಂತ ತಿಳಿಸಿದ್ದಾರೆ.

8. ದೂರುದಾರರು ಸಲ್ಲಿಸಿರುವ ಸ್ಕೆಚ್ ಅನ್ನು ಪರಿಶೀಲಿಸಿದ್ದೇನೆ. ಸರ್ವೆ ನಂ.44/2 ರ ಪಶ್ಚಿಮ ಭಾಗಕ್ಕೆ ಇರುವ ಓಣಿಯಲ್ಲಿ 5 ಗುಂಟೆ ಸರ್ಕಾರಿ ಓಣಿಯನ್ನು ರಿ.ಸರ್ವೆ ನಂ.44/2 ರ ಹಿಡುವಳಿದಾರರು ಒತ್ತುವರಿ ಮಾಡಿರುತ್ತಾರೆ ಅಂತ ಸ್ಕೆಚ್‌ನಲ್ಲಿ ನಮೂದಿಸಲಾಗಿದೆ. ಸರ್ವೆ ನಂ.44/2 ಪಾಲು ವಿಭಾಗದಲ್ಲಿ 2ನೇ ಎದುರುದಾರರಾದ ಶ್ರೀ ವಿ.ಎಸ್. ಸುಜೀವನ್ ಕುಮಾರ ಇವರ ಭಾಗಕ್ಕೆ ಬಂದಿದೆ. ಈಗಾಗಲೇ ನಿರ್ಣಯಕ್ಕೆ ಬಂದಿರುವಂತೆ 2 ಮತ್ತು 3ನೇ ಎದುರುದಾರರು ಖಾಸಗಿ ವ್ಯಕ್ತಿಗಳಾಗಿದ್ದು, 1ನೇ ಎದುರುದಾರರ ವಿರುದ್ಧ ಯಾವುದೇ ಆಪಾದನೆಗಳು ಕಂಡುಬರುತ್ತಿಲ್ಲ. ಸರ್ಕಾರಿ ಓಣಿಯಲ್ಲಿ 5 ಗುಂಟೆಯಷ್ಟು ಜಮೀನು ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಬಹುದಾಗಿದ್ದು, ಸರ್ವೆ ನಂ.44/2 ರ ಹಿಡುವಳಿದಾರರು ಅವರ ಜಮೀನಿನ ಪಶ್ಚಿಮದಲ್ಲಿ ಒತ್ತುವರಿ ಮಾಡಿಕೊಂಡಿರುವ 5 ಗುಂಟೆ ಸರ್ಕಾರಿ ಓಣಿಯನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಂತೆ 1ನೇ ಎದುರುದಾರರ ಶಿಸ್ತುಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಶಿಪಾರಸ್ಸು ಮಾಡಲಾಗಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ